ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಶಾಖೆ / ವಿಷಯ : DEPARTMENT / SUBJECT: ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER ಉದಯವಾಣಿ    ದಿನಾಂಕ : DATE 9/12/2019

# ಚರ್ಚೆಯಾಗದೆ ವಿಧೇಯಕ ಅಂಗೀಕಾರಕ್ಕೆ ಅವಕಾಶ ಬೇಡ

ಬೆಂಗಳೂರು: ಸದನದಲ್ಲಿ ಮಂಡನೆಯಾಗುವ ಯಾವುದೇ ವಿಧೇಯಕದ ಬಗ್ಗೆ ಸದನದ ಕನಿಷ್ಠ 10 ರಿಂದ 20 ಸದಸ್ಯರು ಚರ್ಚಿಸದೇ ಅಂಗೀಕಾರಗೊಳಿಸಲು ಅವಕಾಶ ಇರದಂತೆ ಕಾನೂನು ತಿದ್ದುಪಡಿ ಮಾಡಬೇಕೆಂದು ರಾಜ್ಯ ವಿಧಾನಸಭೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಉತ್ತರಾಖಂಡ್ ರಾಜ್ಯದ ಡೆಹ್ರಾಡೂನ್‌ನಲ್ಲಿ ನಡೆಯುತ್ತಿರುವ 2 ದಿನಗಳ ವಿಧಾನಸಭಾಧ್ಯಕ್ಷರ ಸಮ್ಮೇಳನದಲ್ಲಿ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಯಾವುದೇ ರೀತಿ ಚರ್ಚೆಯಾಗದೇ ಅನೇಕ ವಿಧೇಯಕಗಳು ಅಂಗೀಕಾರವಾಗುತ್ತಿವೆ. ಇದರಿಂದ ವಿಧೇಯಕದ ಬಗ್ಗೆಯಾಗಲಿ ಅಥವಾ ನಂತರ ಜಾರಿಯಾಗುವ ಕಾನೂನಿನ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ಇಲ್ಲದಂತಾಗುತ್ತದೆ. ಹೀಗಾಗಿ ಚರ್ಚಿಸದೇ ಯಾವುದೇ ವಿಧೇಯಕ ಅಂಗೀಕರಿಸಲು ಅವಕಾಶವಿರದಂತೆ ನಿಯಮ ರೂಪಿಸಬೇಕು ಎಂದರು.

ಅಲ್ಲದೇ ಆಡಳಿತ ಪಕ್ಷ ಯಾವುದೇ ವಿಧೇಯಕವನ್ನು ಸದನದಲ್ಲಿ ಮಂಡಿಸುವ ಮೊದಲು ತನ್ನ ಪಕ್ಷದ ಶಾಸಕಾಂಗ ಪಕ್ಷದ ಸಭೆಯಲ್ಲಿ ಚರ್ಚಿಸುವುದನ್ನು ಕಡ್ಡಾಯಗೊಳಿಸಬೇಕು. , ಸ್ಪೀಕರ್ ನಡೆಯನ್ನೇ ಪ್ರಶ್ನಿಸಿ ಸಭಾಧ್ಯಕ್ಷರ ಪೀಠಕ್ಕೆ ಅಗೌರವ ತರುವಂತೆ ನಡೆದುಕೊಳ್ಳುತ್ತಿದ್ದರೆ, ಅಂತಹ ಸದಸ್ಯರನ್ನು ತಕ್ಷಣವೇ ಕಲಾಪದಿಂದ ಅಮಾನತು ಮಾಡುವ ನಿಯಮ ರೂಪಿಸಬೇಕೆಂದು ಕಾಗೇರಿ ಸಲಹೆ ನೀಡಿದರು.



1